ವಿಷಯ:- ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 375 (1864)

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯನ್ನು ಸರ್ಕಾರ ಕೈಗಾರಿಕಾ ರಹಿತ (ನಾನ್-ಇಂಡಸ್ಟ್ರಿಯಲ್ ಡಿಸ್ಟ್ರಿಕ್ಟ್) ಜಿಲ್ಲೆಯೆಂದು ಘೋಷಿಸಿರುವುದು ನಿಜವೇ ?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ಕೈಗಾರಿಕಾ ಬೆಳವಣಿಗೆಗೆ ಸರ್ಕಾರದಿಂದ ಕೈಗೊಳ್ಳಲಾಗಿರುವ ಕ್ರಮಗಳೇನು ?

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲವಾಗುವಂತೆ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆ. ಎಸ್ ಎಸ್. ಐ. ಡಿ. ಸಿ.) ಅಥವಾ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗಳ ವತಿಯಿಂದ ವಸಾಹತುಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವೇನಾದರೂ ಇದೆಯೇ?

ಈ) ಜಿಲ್ಲೆಯಲ್ಲಿ ಈಗಿನ ಉತ್ಪಾಹಿತ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳೇನು ?

ಶ್ರೀಮತಿ ಮನೋರಮ ಮದ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಇಲ್ಲ, ಚಿಕ್ಕಮಗಳೂರು ಜಿಲ್ಲೆಯು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಲಾಗಿದೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಈ ಜಿಲ್ಲೆಗೆ 1991-92ನೇ ಸಾಲಿನಲ್ಲಿ ರೂ.3.50 ಲಕ್ಷಗಳ ಸಹಾಯಧನವನ್ನು 15 ಕೈಗಾರಿಕೆಗಳಿಗೆ ಕೊಡಲಾಗಿದೆ.

ಇ) ಚಿಕ್ಕಮಗಳೂರು ತಾಲ್ಲೂಕಿನ ಕಂಬಳಿ ಗ್ರಾಮದಲ್ಲಿ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವತಿಯಿಂದ 55 ಎಕರೆ 4ಗುಂಟೆ ಸರ್ಕಾರಿ ಜಮೀನನ್ನು ಸ್ವಾಧೀನ ಪಡಿಸಿತೊಡಲಾಗಿದೆ. ಈ ಜಮೀನು ಚಿಕ್ಕಮಗಳೂರು ಪಟ್ಟಣಕ್ಕೆ 7.50 ಕಿ. ಮೀ. ದೂರದಲ್ಲಿರುತ್ತದೆ. ಅದೇ ರೀತಿ ಕೆ.ಎಸ್.ಎಸ್.ಐ.ಡಿ.ಸಿ. ಇವರು ಚಿಕ್ಕಮಗಳೂರಿನಲ್ಲಿ 10 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು 16 ಷೆಡ್‌ಗಳನ್ನು ಈ ವಸಾಹತುವಿನಲ್ಲಿ ನಿರ್ಮಿಸಿರುತ್ತಾರೆ ಕಡೂರು ಬೀರೂರಿನಲ್ಲಿ 11.25 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು 10 ಷೆಡ್‌ಗಳನ್ನು ಈಗಾಗಲೇ ವಸಾಹತುವಿನಲ್ಲಿ ನಿರ್ಮಿಸಲಾಗಿದೆ. 20 ಕೈಗಾರಿಕಾ ಪ್ಲಾಟ್‌ಗಳನ್ನು ಅಭಿವೃದ್ಧಿಪಡಿಸಿ 15 ಪ್ಲಾಟ್‌ಗಳನ್ನು ಚಿಕ್ಕಮಗಳೂರು ಕೈಗಾರಿಕಾ ವಸಾಹತುವಿನಲ್ಲಿಯೂ 15 ಕೈಗಾರಿಕಾ ಪ್ಲಾಟ್‌ಗಳನ್ನು ಅಭಿವೃದ್ಧಿಪಡಿಸಿ 9 ಪ್ಲಾಟ್‌ಗಳನ್ನು ಕಡೂರು ಬೀರೂರಿನ ಕೈಗಾರಿಕಾ ವಸಾಹತುವಿನಲ್ಲಿಯೂ ಹಂಚಲಾಗಿದೆ.

ಈ) ರಾಜ್ಯ ಸರ್ಕಾರದ ಆದೇಶದ ಸಂಖ್ಯೆ : ಸಿಐ 138 ಎಸ್‌ಪಿಸಿ 90 ದಿನಾಂಕ27-9-90 ರಂದು ಹೊರಡಿಸಿ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ವಲಯ 3ರಲ್ಲಿ ಸೇರಿಸಿ ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಲಾಗಿದೆ. ಈ ತಾಲ್ಲೂಕಿನ ಉತ್ಪಾಹಿತ ಕೈಗಾರಿಕೋದ್ಯಮಿಗಳು ಸ್ಥಾಪಿಸುವ ಕೈಗಾರಿಕೆಗಳಿಗೆ ಈ ಕೆಳಕಂಡ ಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಸ್ಥಿರಾಸ್ತಿ ಮೇಲೆ ಹೂಡಿದ ಬಂಡವಾಳದ ಮೇಲೆ ಶೇಕಡಾ 20 ರ ರಾಜ್ಯ ಸಹಾಯಧನವನ್ನು ರೂ. 20 ಲಕ್ಷಕ್ಕೆ ಮೀರದಂತೆ ಕೊಡಲಾಗುತ್ತಿದೆ.

2) 4ವರ್ಷಗಳವರೆಗೆ ಮಾರಾಟ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ.

3) ನೋಂದಣಿ ಶುಲ್ಕ ಮನ್ನಾ ಮತ್ತು ಸಣ್ಣ ಕೈಗಾರಿಕೆಗಳಿಗೆ ವ್ಯವಸಾಯೇತರ ಭೂಮಿ ಪರಿವರ್ತನೆ ಶುಲ್ಕ ಮನ್ನಾ ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ.

4) 6ವಾರಗಳ ದೀರ್ಘ ಮತ್ತು 2 ವಾರಗಳ ಅಲ್ಪಕಾಲದ ಉದ್ಯಮಶೀಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯಾ ಜಿಲ್ಲೆಯ ಸ್ಥಳೀಯ ಅಭ್ಯರ್ಥಿಗಳಿಗೆ ಕೊಡಲಾಗುವುದು. ಈ ತರಬೇತಿಯ ಕಾಲದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಕ್ರಮದ ಬಗ್ಗೆ ತಿಳಿಸಲಾಗುವುದು.

ಶ್ರೀ ಸಿ. ಆರ್. ಸಾಗೀರ್ ಅಹಮದ್ :- ಸನ್ಮಾನ್ಯ ಸಭಾಧ್ಯಕ್ಷರೆಯವರೇ, ಚಿಕ್ಕಮಗಳೂರು ಜಿಲ್ಲೆಯು ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಹಿಂದೆ ಉಳಿದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಜೊತೆಗೆ ಹಿಂದುಳಿದಿದೆಯೆಂದು ಪರಿಗಣಿಸಲಾಗಿದೆ ಎಂದು ಒಂದು ಕಡೆ ಹೇಳುತ್ತಿದ್ದಾರೆ. ಮತ್ತೆ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನೇಕ ಕಡೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಅನೇಕ ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯುತ್ತಿರುವಂಥ ವ್ಯಕ್ತಿಗಳಿಗೆ ನಾವು ಹಂಚಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ, ಚಿಕ್ಕಮಗಳೂರು ಜಿಲ್ಲೆ ನಿಜಕ್ಕೂ ಹೇಳುವುದಾದರೆ, ಕೈಗಾರಿಕಾ ಒಂದು ಕ್ಷೇತ್ರದಲ್ಲಿ ಬಹಳ ಹಿಂದೆ ಉಳಿದಿದೆ. ಇದಕ್ಕಾಗಿ ಸರ್ಕಾರ ಯಾವರೀತಿಯ ಒಂದು ನಿಲುವನ್ನು ತೆಗೆದುಕೊಂಡಿದೆಯೆಂದು ಸ್ಪಷ್ಟವಾಗಿ ಹೇಳುವಂಥ ವಿಚಾರ ಯಾವುದೂ ಅವರ ಉತ್ತರಗಳಲ್ಲಿ ಹೇಳಲಿಲ್ಲ. ಜೊತೆಗೆ, ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವಂಥದ್ದು ಮತ್ತು ಹಂಚಿರತಕ್ಕಂಥದ್ದು ಬಹುಶಃ 10-12 ವರ್ಷಗಳ ಹಿಂದೆ ಇದು ಜಮೀನನ್ನು ವಶಪಡಿಸಿಕೊಂಡಿರತಕ್ಕಂಥ ವಿಚಾರವೆಂದು ನನಗೆ ತಿಳಿದಿದೆ. ಆದರೆ ಅಲ್ಲಿ ಆಗಬೇಕಾದಂತಹ 'ಇಂಡ್ರಸ್ಟ್ರೀಯಲ್' ಶೆಡ್ಡುಗಳು ಮತ್ತು ಕೈಗಾರಿಕೆಯ ಒಂದು ಅಭಿವೃದ್ಧಿಗೆ ಸರ್ಕಾರ ಏನು ನಿಲುವನ್ನು ತೆಗೆದುಕೊಂಡಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಕರ್ನಾಟಕ ರಾಜ್ಯ ಸರ್ಕಾರದವರು ಈ 'ಏಕ್ಸ್' ಕಾರ್ಯಕ್ರಮ ಏನು ಹಾಕಿಕೊಂಡಿದ್ದಾರೆ ಇದರಲ್ಲಿ ಒಂದು ಸಾವಿರ ಶೆಡ್‌ಗಳನ್ನು ಕಟ್ಟುವ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರಲ್ಲಿ ಏನಾದರೂ ನಮ್ಮ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಈ ಶೆಡ್ಡುಗಳನ್ನು ಸ್ಯಾಂಕ್ಷನ್ ಮಾಡಿ ಕಟ್ಟಿಸಿಕೊಡುವ ಆಲೋಚನೆ ಏನಾದರೂ ಸರ್ಕಾರ ಮಾಡಿದೆಯೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ):- ಸನ್ಮಾನ್ಯ ಅಧ್ಯಕ್ಷರೇ, ಸಗೀರ್ ಅಹಮದ್ ಅವರ ಪ್ರಶ್ನೆಗೆ ಬಹಳಷ್ಟು ವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಅದು ಗ್ರೂಪ್ 3 ರಲ್ಲಿ ಇಂಡಸ್ಟ್ರೀಸ್‌ನಲ್ಲಿ ಬರುತ್ತದೆ. ಅದೇ ಪ್ರಕಾರ ಚಿಕ್ಕಮಗಳೂರು, ಕಡೂರು, ಬೀರೂರುನಲ್ಲಿ ಸ್ಥಳ ಸ್ವಾಧೀನ ಮಾಡಿ ಅಲ್ಲಿ ಶೆಡ್ಡು ಕಟ್ಟಲಿಕ್ಕೆ ತಯಾರಿ ಮಾಡಿದ್ದಾರೆ. ಚಿಕ್ಕಮಗಳೂರಿನಲ್ಲಿ 55 ಎಕರೆ 4 ಗುಂಟೆ ಸರ್ಕಾರಿ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಅದರಲ್ಲೂ ಸಹ ಇಷ್ಟರವರೆಗೆ ಸಾಕಷ್ಟು ಬೇಡಿಕೆ ಅಲ್ಲಿ ಇರಲಿಲ್ಲ. ಅದಕ್ಕೆ ನಾನು ಸನ್ಮಾನ್ಯ ಶಾಸಕರಿಗೆ ಹೇಳುವುದು ಏನೆಂದರೆ, ಆದಷ್ಟು ಯುವಕರಿಗೆ ಬೇರೆ ಬೇರೆ ಕೈಗಾರಿಕೆಗಳನ್ನು ಮಾಡಲಿಕ್ಕೆ ಪ್ರೋತ್ಸಾಹ ಕೊಡಬೇಕು. ಸರ್ಕಾರದಿಂದ ಅವರಿಗೆ ಯಾವರೀತಿಯಲ್ಲಿ ಸಲಹೆ, ಸಹಕಾರ, ಸಹಾಯ ಬೇಕೋ ಅದನ್ನು ಕೊಡುತ್ತೇವೆ. ಅಲ್ಲಿ ಬರುವ ಅಭ್ಯರ್ಥಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲ ಆಗುವಂತೆ ದೀರ್ಘವಾದ ಮತ್ತು ಅಲ್ಪಕಾಲಿಕವಾದ ಉದ್ಯಮಶೀಲ ಅಭಿವೃದ್ಧಿ ತರಬೇತಿಯ ಕಾರ್ಯಕ್ರಮಗಳನ್ನು ಪ್ರತಿ ವರ್ಷವೂ ಅಲ್ಲಿ ಕೋರ್ಸ್‌ನ್ನು ಮಾಡುತ್ತಾರೆ. ಎಲ್ಲದಕ್ಕೂ ಸಹ ನೀವು ಆ ಯುವಕರನ್ನು ತರಬೇತಿ ಕೇಂದ್ರಗಳಿಗೆ ಕಳುಹಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಸನ್ಮಾನ್ಯ ಉಪಸಭಾಪತಿಯವರೇ, ವಿಶ್ವ ಕಾರ್ಯಕ್ರಮದಲ್ಲಿ ಈ ಶೆಡ್‌ಗಳನ್ನು ಕಟ್ಟುವ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಆದುದರಿಂದ ಅವರ ಉತ್ತರವನ್ನು ನಾನು ನಿರೀಕ್ಷಿಸುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ವಿಶ್ವ ಕಾರ್ಯಕ್ರಮವನ್ನು ಸಣ್ಣ ಕೈಗಾರಿಕಾ ಮಂತ್ರಿಗಳಾದ ಶ್ರೀ ನಜೀರ್ ಅಹಮದ್ ಅವರು ನೋಡಿಕೊಳ್ಳುತ್ತಿದ್ದಾರೆ. ದಯಮಾಡಿ ಸಾವು ಅವರಿಗೆ ಒಂದು ಪ್ರಶ್ನೆ ಹಾಕಿದರೆ

ಸರಿಯಾದ ಉತ್ತರ ನಿಮಗೆ ಸಿಗುತ್ತದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು

ವಿಷಯ :-ನಿಮ್ನ ಜಾತಿ - ವರ್ಗಗಳ ರೈತರಿಗೆ ಬೋರ್‌ವೆಲ್ ಮಂಜರಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 363 (1838)

ಶ್ರೀ ಎ. ಮಿ. ಉಮಾಪತಿ (ಹೊಳಲ್ಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯಾದ್ಯಂತ ಪರಿಶಿಷ್ಟ ಜಾತಿ ವರ್ಗಗಳವರ ರೈತರ ಅನುಕೂಲಕ್ಕಾಗಿ ಕಾರ್ಪೊರೇಷನ್ ಮತಿಯಿಂದ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ.

ಆ) ಸದರಿ ಬೋರ್‌ವೆಲ್‌ಗಳಲ್ಲಿ ಎಷ್ಟು ಉತ್ತಮವಾಗಿ ಕೆಲಸ ಮಾಡುತ್ತಿವೆ : ಎಷ್ಟು ಸ್ಥಗಿತಗೊಂಡಿವೆ.

ಇ) ಹೀಗೆ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಯಾವ ಏಜೆನ್ಸಿಯನ್ನು ಸರ್ಕಾರ ಗೊತ್ತು ಪಡಿಸಿದೆ

ಈ) ಹೊಳಲ್ಕೆರೆ ತಾಲ್ಲೂಕಿನಲ್ಲಿ ಎಷ್ಟು ಫಲಾನುಭವಿಗಳಿಗೆ ಇದರಿಂದ ಲಾಭ ದೊರೆತಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) 1984-85ನೇ ಸಾಲಿನಿಂದ ಫೆಬ್ರುವರಿ 92ರ ಕೊನೆಯವರೆಗೆ ಒಟ್ಟು 856 ಕೊಳವೆ ಬಾವಿಗಳನ್ನು ತೋಡಿಸಲಾಗಿದೆ.

ಆ) ಉತ್ತಮವಾಗಿ ಕೆಲಸ ಮಾಡುತ್ತಿರುವ ಬೋರ್‌ವೆಲ್‌ಗಳು 755
ಇನ್ನೂ ವಿದ್ಯುದ್ದೀಕರಣವಾಗಬೇಕಾದ ಬೋರ್‌ವೆಲ್‌ಗಳು 85
ಸ್ಥಗಿತಗೊಂಡ ಬೋರ್‌ವೆಲ್‌ಗಳು 16

ಇ) 1991-92ನೇ ಸಾಲಿಗೆ ಈ ಕೆಳಕಂಡ ಕಂಪನಿಗಳಿಗೆ ಕೊಳವೆ ಬಾವಿ ಕೊರೆಯುವ ಕಾರ್ಯಕ್ರಮವನ್ನು ವಹಿಸಲಾಗಿದೆ.

1) ಮೆ:ವಿಜಯಲಕ್ಷ್ಮಿ ಬೋರ್‌ವೆಲ್ಸ್ ಜೋಗಿಮಠ ರಸ್ತೆ, ಚಿತ್ರದುರ್ಗ
2) ಮೆ:ಜಲವಾಹಿನಿ ಬೋರ್‌ವೆಲ್ ಕಂ. ದಾವಣಗೆರೆ.

ಈ) 84-85 ರಿಂದ ಒಟ್ಟು 81

ವಿಷಯ :- ವಿಶ್ವ ಯೋಜನೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 362 (2208)

ಶ್ರೀ ಆರ್. ಎಲ್. ಛಾಲವಾದಿ (ದೊಡ್ಡಬಳ್ಳಾಪುರ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ವಿಶ್ವ ಯೋಜನೆಯಡಿಯಲ್ಲಿ ಎಷ್ಟು ಕುಶಲ ಕರ್ಮಿಗಳನ್ನು ಗುರುತಿಸಲಾಗಿದೆ ? ಹಾಗೂ ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಇಲ್ಲಿಯವರೆಗೆ ಫಲಾನುಭವಿಗಳಿಗೆ ಕೊಟ್ಟಿರುವ ಹಣದ ನೆರವಿನ ಪ್ರಮಾಣ ಎಷ್ಟು ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಒಟ್ಟು 160 ಫಲಾನುಭವಿಗಳನ್ನು ಗುರುತಿಸಲಾಗಿದ್ದು ಈ ಕೆಳಗಿನಂತೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಕುಂಬಾರಿಕೆ, ಕೈಮಗ್ಗ, ಬಡಗಿತನ, ಉಣ್ಣೆ, ನೇಯ್ಗೆ, ರೇಷ್ಮೆ ಟ್ವಿಸ್ಟಿಂಗ್, ಸಿದ್ಧ ಪಡಿಸಿದ ಉಡುಪುಗಳು, ಪೋಟಾಟೋ ಚಿಪ್ಸ್ ತಯಾರಿಕೆ, ವಲ್ಕನೈಸಿಂಗ್, ವಿದ್ಯುತ್ ಮಗ್ಗಗಳು ಇತರೆ.

ಆ) ಒಟ್ಟು 4.58 ಲಕ್ಷ ರೂ.ಗಳಷ್ಟು ಹಣದ ನೆರವನ್ನು ಫಲಾನುಭವಿಗಳಿಗೆ ಒದಗಿಸಲಾಗಿರುತ್ತದೆ.